ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

---

**ಸಂಖ್ಯೆ:-ಎಡಿಎಂ2(3)ಸ.ಶಾ.ಹ.ಬ್ರ/.ಭೂ.ಸ್ವಾಪ/01/2020-21** ದಿನಾಂಕ:-**17.11.2020**.

**-:ಸುತ್ತೋಲೆ:-**

ವಿಷಯ:- ಭೂಮಿ / ಕಟ್ಟಡ ಮಾರಾಟ / ಪರಭಾರೆಯಿಂದ ಬಂದಂತಹ ಮೊತ್ತ / ಭೂಸ್ವಾಧೀನ ಪರಿಹಾರದ ಬಾಬ್ತು ಹಣವನ್ನು ಸರ್ಕಾರದ ಲೆಕ್ಕಶೀರ್ಷಿಕೆಗೆ ತಕ್ಷಣ ಜಮಾ ಮಾಡುವ ಬಗ್ಗೆ.

ಉಲ್ಲೇಖ:-1. ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ 01 ಟಿಎಫ್‌ಸಿ 2020. ದಿನಾಂಕ:10.06.2020.

2. ಇಂತಹ ಪ್ರಕರಣಗಳ ಕಡತದಲ್ಲಿ ಈ ಕಛೇರಿಯ ಮುಖ್ಯ ಲೆಕ್ಕಾಧಿಕಾರಿಗಳು ನೀಡಿರುವ ಅಭಿಪ್ರಾಯದಂತೆ.

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಶಾಲೆಗಳ ಜಾಗಗಳನ್ನು ಭೂಸ್ವಾಧೀನ ಮಾಡಿಕೊಂಡಿದ್ದರ ಸಲುವಾಗಿ ಪರಿಹಾರದ ರೂಪದಲ್ಲಿ ಸ್ವೀಕೃತವಾಗಿರುವ ಮೊತ್ತಗಳನ್ನು ಬಳಸಿಕೊಂಡು ಸದರಿ ಶಾಲೆಗಳಿಗೆ ಮೂಲಭೂತ ಸೌಲಭ್ಯವನ್ನು ಒದಗಿಸಲು ಅನುಮತಿಯನ್ನು ನೀಡಲು ಕ್ರಮವಹಿಸುವಂತೆ ಕೋರಿ ರಾಜ್ಯದ ಕೆಲವು ಉಪನಿರ್ದೇಶಕರು (ಆಡಳಿತ), ರವರಿಂದ ಪ್ರಸ್ತಾವನೆಗಳು ಸ್ವೀಕೃತವಾಗಿರುತ್ತದೆ.

ಈ ಕುರಿತು ಪರಿಶೀಲಿಸಲಾಗಿ ಉಲ್ಲೇಖ-01 ರಲ್ಲಿ ಇಂತಹ ಮೊತ್ತಗಳನ್ನು ಸರ್ಕಾರದ ಸಂಚಿತ ನಿಧಿಗೆ ಜಮೆ ಮಾಡಲು ಸೂಚಿಸಲಾಗಿದೆ (ಪ್ರತಿ ಲಗತ್ತಿಸಿದೆ).

ಮುಂದುವರೆದು, ಇಂತಹದೇ ಪ್ರಕರಣಗಳಲ್ಲಿ **ಭೂಸ್ವಾಧೀನ ಮಾಡಿಕೊಂಡಿದ್ದರ ಸಲುವಾಗಿ ಪರಿಹಾರದ ರೂಪದಲ್ಲಿ ಸ್ವೀಕೃತವಾಗಿರುವ ಮೊತ್ತವನ್ನು ಸರ್ಕಾರದ ಲೆಕ್ಕ ಶೀರ್ಷಿಕೆ 0202-01-600-0-01-000 ಗೆ ಹಾಗೂ ಬಡ್ಡಿ ಮೊತ್ತವನ್ನು ಸರ್ಕಾರದ ಲೆಕ್ಕ ಶೀರ್ಷಿಕೆ 0049-04-800-5-08 ಗೆ ಜಮೆ ಮಾಡುವಂತೆ** ಈ ಕಛೇರಿಯ ಮುಖ್ಯ ಲೆಕ್ಕಾಧಿಕಾರಿಗಳು ಉಲ್ಲೇಖ-02 ರಲ್ಲಿ ಅಭಿಪ್ರಾಯ ನೀಡಿರುತ್ತಾರೆ.

ಉಲ್ಲೇಖ-01 ರ ಸರ್ಕಾರದ ಸುತ್ತೋಲೆ ಹಾಗೂ ಉಲ್ಲೇಖ-02 ರಲ್ಲಿನ ಈ ಕಛೇರಿಯ ಮುಖ್ಯ ಲೆಕ್ಕಾಧಿಕಾರಿಗಳ ಅಭಿಪ್ರಾಯದಂತೆ " ಭೂಮಿ / ಕಟ್ಟಡ ಮಾರಾಟ / ಪರಭಾರೆಯಿಂದ ಬಂದಂತಹ ಮೊತ್ತ / ಭೂಸ್ವಾಧೀನ ಪರಿಹಾರದ ಬಾಬ್ತು ಮೊತ್ತವನ್ನು **ಸರ್ಕಾರದ ಲೆಕ್ಕ ಶೀರ್ಷಿಕೆ 0202-01-600-0-01-000 ಗೆ ಹಾಗೂ ಬಡ್ಡಿ ಮೊತ್ತವನ್ನು ಸರ್ಕಾರದ ಲೆಕ್ಕ ಶೀರ್ಷಿಕೆ 0049-04-800-5-08 ಗೆ** ಆಗಿಂದಾಗ್ಗೆ / **ತಕ್ಷಣ ಜಮೆ ಮಾಡಲು** ಸೂಕ್ತ ಕ್ರಮಗಳನ್ನು ವಹಿಸುವಂತೆ ಕೋರಲಾಗಿದೆ/ ತಿಳಿಸಲಾಗಿದೆ.

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

ಇವರಿಗೆ,

01. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ / ಧಾರವಾಡ ಇವರಿಗೆ ಗೌರವಪೂರ್ವಕವಾಗಿ ಕಳುಹಿಸಿದೆ.
02. ನಿರ್ದೇಶಕರು, ಪ್ರೌಢ ಶಿಕ್ಷಣ / ಅಲ್ಪಸಂಖ್ಯಾತ ಭಾಷಾ ಶಾಲೆಗಳು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
03. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., ಬನಶಂಕರಿ ಹೊರ ವರ್ತುಲ ರಸ್ತೆ, ಬೆಂಗಳೂರು.
04. ಮುಖ್ಯ ಲೆಕ್ಕಾಧಿಕಾರಿಗಳು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
05. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ.
06. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಆಯಾ ಉಪನಿರ್ದೇಶಕರು(ಆಡಳಿತ) ರವರ ಮೂಲಕ.
07. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಘಟಕ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಇಲಾಖಾ ಅಂತರ್ಜಾಲ ತಾಣದಲ್ಲಿ ಅಳವಡಿಸಲು.
08. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

ಸಂ:ಆಇ 01 ಟಿಎಫ್‌ಸಿ 2020

ಕರ್ನಾಟಕ ಸರ್ಕಾರದ ಸಚಿವಾಲಯ.
ವಿಧಾನಸೌಧ
ಬೆಂಗಳೂರು. ದಿನಾಂಕ:10.06.2020.

## ಸುತ್ತೋಲೆ

ವಿಷಯ:-ಯೂಸರ್ ಚಾರ್ಜಸ್, ಫೀ ಮತ್ತು ದಂಡನೆ ಮುಂತಾದವುಗಳ ರಾಜಸ್ವಗಳನ್ನು ಸಂಚಿತ ನಿಧಿಗೆ ಜಮೆ ಮಾಡುವ ಬಗ್ಗೆ.

****-****

ಕ.ಆ.ಸಂ. ಅನುಚ್ಛೇಧ-4(ಎ) ಪ್ರಕಾರ ಸ್ವೀಕರಿಸಲಾದ ಎಲ್ಲಾ ಹಣವನ್ನು ಯಾವುದೇ ಸಂದರ್ಭದಲ್ಲಿಯೂ ಸಹ ಅನಾವಶ್ಯಕ ವಿಳಂಬವಿಲ್ಲದೆ ಎರಡು ದಿನಗಳೊಳಗಾಗಿ ಸರ್ಕಾರಿ ಖಜಾನೆಗೆ ಜಮೆ ಮಾಡುವಂತೆ ನಿಯಮದಲ್ಲಿ ಹೇಳಲಾಗಿದೆ ಹಾಗೂ ಕ.ಆ.ಸಂ. ಅನುಚ್ಛೇದ 5 ರ ನಿಯಮಗಳ ಪ್ರಕಾರ ಇಲಾಖಾ ಆದಾಯಗಳನ್ನು, ನಿರ್ಧಿಷ್ಟ ಅಧಿಕಾರವಿದ್ದಲ್ಲದೆ, ಇಲಾಖಾ ವೆಚ್ಚಗಳಿಗಾಗಿ ವಿನಿಯೋಗಿಸುವುದನ್ನು ಕಟ್ಟುನಿಟ್ಟಾಗಿ ಪ್ರತಿಬಂದಿಸಲಾಗಿದೆ.

ಸರ್ಕಾರದ ಸಂಖ್ಯೆ:ಎಫ್‌ಡಿ 715 ಎಫ್‌ಆರ್ 2003, ದಿ:23.01.2004 ರ ಸುತ್ತೋಲೆಯಲ್ಲಿ ರಾಜ್ಯ ಸರ್ಕಾರದಿಂದ ಸಂಗ್ರಹಿಸಲಾಗುವ ಯೂಸರ್ ಚಾರ್ಜಸ್, ಫೀ ಮತ್ತು ದಂಡನೆ ಮುಂತಾದವುಗಳ ರಾಜಸ್ವಗಳನ್ನು ಕ.ಆ.ಸಂ. ನಿಯಮಗಳಾನುಸಾರ ನಿಗದಿತ ಅವಧಿಯೊಳಗೆ ಸರ್ಕಾರಿ ಖಜಾನೆಗೆ ಸಂದಾಯ ಮಾಡುವಂತೆ ಮತ್ತು ಇಲಾಖಾ ವೆಚ್ಚಗಳಿಗೆ ಉಪಯೋಗಿಸದಂತೆ ತಿಳಿಸಲಾಗಿದೆ.

ಸರ್ಕಾರದ ಹಾಗೂ ಸರ್ಕಾರದಿಂದ ಸಹಾಯಾನುದಾನ ಪಡೆಯುವ ನಿಗಮ/ಮಂಡಳಿಗಳಿಗೆ ಸೇರಿದ ಭೂಮಿ/ ಕಟ್ಟಡವು ರಾಜ್ಯ ಸರ್ಕಾರದ ಆಸ್ತಿಯೆಂದು ಪರಿಗಣಿಸಬೇಕಾಗಿದ್ದು ಇವುಗಳ ಮಾರಾಟದಿಂದ ಬಂದಂತಹ ಮೊತ್ತ ಅಥವಾ ಭೂ ಪರಿಹಾರ ಮೊತ್ತಗಳನ್ನು ಬಂಡವಾಳ ಸ್ವೀಕೃತಿಯೆಂದು ಪರಿಗಣಿಸಲಾಗುತ್ತದೆ. ಆದರೆ, ನಿಯಮಾನುಸಾರ ಇಂತಹ ಸ್ವೀಕೃತಿಗಳನ್ನು ನಿಗದಿತ ಅವಧಿಯೊಳಗೆ ಸಂಚಿತ ನಿಧಿಗೆ ಜಮೆ ಮಾಡದೆ ನಿಗಮ / ಮಂಡಳಿಗಳ ಬ್ಯಾಂಕ್ ಖಾತೆಗೆ ಜಮೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆದುದರಿಂದ, ಕ.ಆ.ಸಂ. ಅನುಚ್ಛೇದ-4(ಎ) ರಂತೆ ಸ್ವೀಕೃತಿಗಳನ್ನು ಅನಾವಶ್ಯಕ ವಿಳಂಬವಿಲ್ಲದೆ ಎರಡು ದಿನಗಳೊಳಗಾಗಿ ಸರ್ಕಾರದ ಖಜಾನೆಗೆ ಜಮೆ ಮಾಡುವುದು ಕಡ್ಡಾಯವಾಗಿರುತ್ತದೆ. ಭೂಮಿ/ ಕಟ್ಟಡದ ಮಾರಾಟದಿಂದ ಬಂದಂತಹ ಮೊತ್ತ ಅಥವಾ ಭೂ ಪರಿಹಾರ ಮೊತ್ತ, ಯೂಸರ್ ಚಾರ್ಜಸ್, ಫೀ ಮತ್ತು ದಂಡ ಮೊತ್ತ ಮುಂತಾದವುಗಳನ್ನು ಇಲಾಖಾ ಆಡಳಿತ ವೆಚ್ಚಗಳಿಗೆ ವಿನಿಯೋಗಿಸುವುದನ್ನು ಕಟ್ಟುನಿಟ್ಟಾಗಿ ಪ್ರತಿಬಂಧಿಸಲಾಗಿದೆ. ಸರ್ಕಾರದಿಂದ ಸಹಾಯಾನುದಾನ ಪಡೆಯುವ ಎಲ್ಲಾ ನಿಗಮ/ಮಂಡಳಿಗಳಿಗೂ ಭೂಮಿ/ ಕಟ್ಟಡ ಮಾರಾಟ/ ಪರಭಾರೆಯಿಂದ ಬಂದಂತಹ ಮೊತ್ತವನ್ನು ಬ್ಯಾಂಕ್ ಖಾತೆಯಲ್ಲಿರಿಸಿಕೊಳ್ಳದೇ ಕಡ್ಡಾಯವಾಗಿ ಸಂಚಿತ ನಿಧಿಗೆ ಜಮೆ ಮಾಡುವಂತೆ ಸೂಚಿಸಲು ತಿಳಿಸಿದೆ.

10/6/2020

(ಹೆಚ್.ಎ. ಶೋಭ)
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆನಿ ಮತ್ತು ಬಿಸಿಸಿ).

4605 3
19 6 20

ಪ್ರತಿಗಳು:-

1. ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5326/5369 ಬೆಂಗಳೂರು.